## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಮೇಶ ಬಾಬುರವರ ನಿಯಮ 72 ನೇ ಮೇರೆಗಿನ ಗಮನ ಸೆಳೆಯುವ ಸೂಚನೆಗೆ ಉತ್ತರ.

### ಸೂಚನೆ:

ಕರ್ನಾಟಕದ ಮಾಜಿ ಸಚಿವರು, ದಲಿತ ಮುಖಂಡರು ಭೂಸಾ ಚಳುವಳಿಯ ಹೇಳಿಕೆ ಮೂಲಕ ಜಾಗೃತಿ ಅಡಿಪಾಯವನ್ನು ಮೂಡಿಸಿದವರು ಶ್ರೀ ಬಿ. ಬಸವಲಿಂಗಪ್ಪನವರು. ಅದೇ ರೀತಿ ಪ್ರೊ. ಬಿ. ಕೃಷ್ಣಪ್ಪನವರು ಕರ್ನಾಟಕದಲ್ಲಿ ದಲಿತ ಚಳುವಳಿ ವೈಚಾರಿಕವಾಗಿ ರಾಜ್ಯದ ಮೂಲೆ ಮೂಲೆ ತಲುಪುವಲ್ಲಿ ಮತ್ತು ದಲಿತ ನಾಯಕರಿಗೆ ಸೈದ್ಧಾಂತಿಕ ಹಿನ್ನಲೆಯಲ್ಲಿ ಶಕ್ತಿ ತುಂಬುವಲ್ಲಿ ಅಗಾಧವಾದ ಕೊಡುಗೆಯನ್ನು ನೀಡಿರುತ್ತಾರೆ. ಕರ್ನಾಟಕದ ದಲಿತ ಚಳುವಳಿಗೆ, ದಲಿತ ಸಮುದಾಯಕ್ಕೆ ಬಿ. ಬಸವಲಿಂಗಪ್ಪನವರು ಮತ್ತು ಪ್ರೊ. ಬಿ. ಕೃಷ್ಣಪ್ಪನವರು ಅತ್ಯಂತ ದೊಡ್ಡ ಶಕ್ತಿ. ಇವರು ಇಬ್ಬರೂ ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನವರು. ಕರ್ನಾಟಕ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು ಇವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸುವುದು ಕರ್ನಾಟಕದ ಮತ್ತು ದಲಿತ ಚಳುವಳಿಯ ಹಿನ್ನಲೆಯಲ್ಲಿ ಬಹಳ ಪ್ರಾಮುಖ್ಯತೆಯನ್ನು ಪಡೆದಿರುತ್ತದೆ. ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ಈ ಇಬ್ಬರು ದಲಿತ ನಾಯಕರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸಲು ಮುಂದಾಗುವ ಕುರಿತು ಮಾನ್ಯ ಕರ್ನಾಟಕ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

******

### ಉತ್ತರ:

ಬೆಂಗಳೂರು ನಗರದಲ್ಲಿ ದಿವಂಗತ ಶ್ರೀ ಬಿ. ಬಸವಲಿಂಗಪ್ಪನವರ ಸ್ಮಾರಕ ಅಭಿವೃದ್ಧಿ ಹಾಗೂ ಸೌಂದರ್ಯಕರಣ ನಿರ್ಮಾಣ ಕಾಮಗಾರಿಯನ್ನು ಮತ್ತು ಪ್ರೊ|| ಬಿ. ಕೃಷ್ಣಪ್ಪ ರವರ ಹೆಸರಿನಲ್ಲಿ ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ ಇಲ್ಲಿ ಅಧ್ಯಯನ ಕೇಂದ್ರ ಸ್ಥಾಪನೆ ಹಾಗೂ ಹರಿಹರ ನಗರದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಸ್ಮಾರಕ ಭವನ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಈಗಾಗಲೇ ಮಂಜೂರಾತಿ ನೀಡಿ, ಅನುದಾನ ಬಿಡುಗಡೆ ಮಾಡಲಾಗಿದ್ದು ವಿವರಗಳು ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆ | ಕಾರ್ಯಕ್ರಮ/ ಕಾಮಗಾರಿ | ಆದೇಶ ದಿನಾಂಕ | ಮಂಜೂರಾತಿ ಮೊತ್ತ | ಬಿಡುಗಡೆ ಮಾಡಿದ ಮೊತ್ತ |
|---|---|---|---|---|---|
| 1 | ದಾವಣಗೆರೆ | ದಿವಂಗತ ಪ್ರೊ|| ಬಿ. ಕೃಷ್ಣಪ್ಪರವರ ಹೆಸರಿನಲ್ಲಿ ಹರಿಹರ ನಗರದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಸ್ಮಾರಕ ಭವನ ನಿರ್ಮಾಣ ಕಾಮಗಾರಿಗೆ ಸಹಾಯ ಧನ (ಸಾಮಾಜಿಕ ಮತ್ತು ಸಾಂಸ್ಕೃತಿಕ ಭವನ ನಿರ್ಮಾಣ) | ದಿ:12-03-2015; ದಿ:30-01-2013 & ದಿ:03-03-2017 | 250.00 | 250.00 |
| 2 | ಬೆಂಗಳೂರು ನಗರ | ದಿವಂಗತ ಶ್ರೀ ಬಿ. ಬಸವಲಿಂಗಪ್ಪನವರ ಸ್ಮಾರಕ ನಿರ್ಮಾಣ ಮತ್ತು ಸೌಂಧೀಕರಣಕ್ಕೆ ಸಹಾಯ ಧನ | ದಿ:03-03-2021& ದಿ:28-07-2025 | 100.00 | 20.00 |

| | | | | | |
|---|---|---|---|---|---|
| 3 | ಶಿವಮೊಗ್ಗ | ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ ಇಲ್ಲಿ ಪ್ರೊ|| ಬಿ. ಕೃಷ್ಣಪ್ಪರವರ ಹೆಸರಿನಲ್ಲಿ ಅಧ್ಯಯನ ಕೇಂದ್ರ ಸ್ಥಾಪನೆಗೆ ಸಹಾಯ ಧನ | ದಿ:19-11-2016 | 100.00 | 100.00 |

ಮುಂದುವರೆದು, ದಾವಣಗೆರೆ ಜಿಲ್ಲೆ ಹರಿಹರದಲ್ಲಿ ಶ್ರೀ ಬಿ. ಬಸವಲಿಂಗಪ್ಪನವರು ಮತ್ತು ಪ್ರೊ|| ಬಿ. ಕೃಷ್ಣಪ್ಪನವರ ಹೆಸರಿನಲ್ಲಿ ಪ್ರಸ್ತುತ ಸಮಾಜ ಕಲ್ಯಾಣ ಇಲಾಖೆಯಿಂದ ಯಾವುದೇ ಅಧ್ಯಯನ ಪೀಠ ಸ್ಥಾಪನೆಯಾಗಿರುವುದಿಲ್ಲ. ಇಬ್ಬರು ಮಹನೀಯರ ಅಧ್ಯಯನ ಪೀಠಗಳ ಸ್ಥಾಪಿಸುವ ಸಂಬಂಧವಾಗಿ ಪ್ರಸ್ತಾವನೆಯನ್ನು ಪಡೆದು ಅಧ್ಯಯನ ಪೀಠಗಳ ಸ್ಥಾಪನೆಗೆ ಮುಂದಿನ ಕ್ರಮವಹಿಸಲಾಗುವುದು.

ಸಂಖ್ಯೆ:ಸಕಇ 72 ಪಕವಿ 2026

(ಡಾ. ಹೆಚ್.ಸಿ. ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು